830 ಶ್ರೀ ಪಾಟೀಲ್ ಡಿ ಆರ್ (ಗದಗ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರದಲ್ಲಿರುವ ಸ್ಥಳೀಯ ಸಂಸ್ಥೆಗಳ ಚುನಾಯಿತ ಆಡಳಿತ ಮಂಡಳಿಗಳ ಅಧಿಕಾರ ಮುಗಿದಿದ್ದು ಯಾವಾಗ,

ಆ) ಈ ಸಂಸ್ಥೆಗಳಿಗೆ ಕಾನೂನು ಪ್ರಕಾರ ಹೊಸ ಆಡಳಿತ ಮಂಡಳಿಯ ಚುನಾವಣೆ ನಡೆಸಬೇಕಾಗಿದ್ದು ಯಾವಾಗ, ಅವಧಿ ಮುಗಿಯುವ ಪೂರ್ವದಲ್ಲೇ ಸರಕಾರ ಈ ಬಗ್ಗೆ ಅವಶ್ಯ ಕ್ರಮ ಕೈಗೊಳ್ಳದಿರಲು ಕಾರಣವೇನು,

ಇ) ಈ ಸಂಸ್ಥೆಗಳಿಗೆ ಯಾವಾಗ ಚುನಾವಣೆ ನಡೆಸಲಾಗುವುದು (ವಿವರ ನೀಡುವುದು),

ಈ) ಸರ್ವೋಚ್ಚ ನ್ಯಾಯಾಲಯ ಈ ಚುನಾವಣೆಗಳ ಬಗ್ಗೆ ಕೊಟ್ಟಿರುವ ತೀರ್ಪುಗಳೇನು,

ಉ) ರಾಜ್ಯದಲ್ಲಿ ತೀರ್ಪನ್ನು ಅನುಷ್ಠಾನಗೊಳಿಸಲು ಸರಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು):

ಅ) ವಿವರಗಳನ್ನು ಅನುಬಂದ–1ರಲ್ಲಿ ನೀಡಲಾಗಿದೆ

ಆ) ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಕೌನ್ಸಿಲ್ ಅವಧಿಯು ಮುಗಿದ ತಕ್ಷಣ ಆಯಾ ನಗರಸಂಸ್ಥೆಗಳಿಗೆ ಚುನಾವಣೆಯನ್ನು ನಡೆಸಬೇಕಾಗುತ್ತದೆ ಮೇಲೆ ನಮೂದಿಸಿರುವ ಅನುಬಂಧ–1 ರಲ್ಲಿನ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬೇಕಾಗಿರುತ್ತದೆ ಜೂನ್ 2006ರ ಅವಧಿಯಲ್ಲಿ ಒಟ್ಟು 39 ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಕೌನ್ಸಿಲ್ ಅವಧಿಯು ಮುಗಿದಿದ್ದು ಅಂತಹ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಯನ್ನು ನಡೆಸಲು ಸರ್ಕಾರವು ಮಿಸಲಾತಿಯನ್ನು ನಿಗಧಿ ಪಡಿಸಿ ಚುನಾವಣೆ ನಡೆಸುವಂತೆ ಆಯುಕ್ತರು, ರಾಜ್ಯ ಚುನಾವಣಾ ಆಯೋಗ ಇವರನ್ನು ಕೋರಲಾಗಿತ್ತು

ಸದರಿ ಮೀಸಲಾತಿ ಅಧಿಸೂಚನೆಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 7107/06, 7871/06ರಲ್ಲಿ ಪ್ರಶ್ನಿಸಲಾಗಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 16 6 2006 ರ ಆದೇಶದಲ್ಲಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವಾರ್ಡುಗಳ ಕ್ಷೇತ್ರಗಳನ್ನು

2001ರ ಜನಗಣತಿಯನ್ವಯ ಪರಿಷ್ಕರಿಸಿ ತದನಂತರ, ಚುನಾವಣೆಯನ್ನು ನಡೆಸುವಂತೆ ಆದೇಶಿಸಿದ ಹಿನ್ನೆಲೆಯಲ್ಲಿ ಸರ್ಕಾರವು ಆದೇಶ ಸಂಖ್ಯೆ ನಅಇ 34 ಎಂಎಲ್ ಆರ್ 2006, ದಿನಾಂಕ 3 6 2006ರಲ್ಲಿನ ಮಾರ್ಗಸೂಚಿಗಳ ಪ್ರಕಾರ ಮೀಸಲಾತಿ ನಿಗದಿಪಡಿಸಿ ಹೊರಡಿಸಲಾಗಿದ್ದ ಎಲ್ಲಾ ಆದೇಶಗಳನ್ನು ರದ್ದುಗೊಳಿಸಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶಾನುಸಾರ ಕ್ಷೇತ್ರಗಳ ಮರು ವಿಂಗಡಣೆ ಕುರಿತು ಮಾರ್ಗ ಸೂಚಿಗಳನ್ನು ದಿನಾಂಕ18 8 2006ರ ಆದೇಶದ ಮೂಲಕ ಹೊರಡಿಸಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ 2001ರ ಜನಗಣತಿಯನ್ವಯ ನಗರ ಸ್ಥಳೀಯ ಸಂಸ್ಥೆಗಳ ವಾರ್ಡುಗಳ ಕ್ಷೇತ್ರಗಳನ್ನು ಪುನರ್ ವಿಂಗಡಿಸಿ ಪ್ರಸ್ತಾವೆಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಲಾಗಿತ್ತು ಹಾಗೂ ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 3,9,11 ಹಾಗೂ ಕರ್ನಾಟಕ ಮಹಾ ನಗರ ಪಾಲಿಕೆ ಕಾಯ್ದೆ 1976ರ ಕಲಂ 3 ಮತ್ತು 7ರನ್ವಯ ಒಟ್ಟು ಒಂದು ನಗರಸಬೆಯನ್ನು ಮಹಾನಗರ ಪಾಲಿಕೆಯನ್ನಾಗಿ, 9 ಪುರಸಭೆಗಳನ್ನು ನಗರ ಸಭೆಗಳನ್ನಾಗಿ 25 ಪಟ್ಟಣ ಪಂಚಾಯಿತಿಗಳನ್ನು ಪುರಸಭೆಗಳನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಸೂಕ್ತ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಲು ನಿರ್ದೇಶಿಸಲಾಗಿತ್ತು ಅದಲ್ಲದೆ, ಕ್ಷೇತ್ರಗಳ ಮರುವಿಂಗಡಣೆ ಕುರಿತು ಅನುಬಂಧ–2ರಲ್ಲಿ ನಿಗಧಿ ಪಡಿಸಲಾದಂತೆ ತಪ್ಪದೇ ಕ್ರಮ ವಹಿಸಲು ನಿರ್ದೇಶಿಸಲಾಗಿತ್ತು, ಅದರಂತೆ ಪ್ರಸ್ತಾವನೆಗಳನ್ನು ಪಡೆದು ಒಟ್ಟು ಒಂದು ನಗರಸಭೆಯನ್ನು ಮಹಾನಗರ ಪಾಲಿಕೆಯನ್ನಾಗಿ ಮತ್ತು 9 ಪುರಸಭೆಗಳನ್ನು ನಗರಸಭೆಗಳನ್ನಾಗಿ ಹಾಗೂ 24 ಪಟ್ಟಣ ಪಂಚಾಯಿತಿಗಳನ್ನು ಪುರಸಭೆಗಳನ್ನಾಗಿ ಮೇಲ್ದರ್ಜೆಗೇರಿಸಿ ಆದೇಶಿಸಲಾಗಿದೆ ಬನ್ನೂರು ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರದ ಪರಿಶೀಲನೆಯಲ್ಲಿದ್ದು ಮೈಸೂರು ಚಾಮುಂಡೇಶ್ವರಿ ಮತ ಕ್ಷೇತ್ರದ ಚುನಾವಣೆಯಿಂದಾಗಿ ಕಾಲವಿಳಂಬವಾಗಿದೆ

ಸರ್ಕಾರದ ದಿನಾಂಕ 2 11 2006ರ ಆದೇಶಾನುಸಾರ ಬೆಂಗಳೂರು ಮಹಾನಗರ ಪಾಲಿಕೆಯೊಂದಿಗೆ 7 ನಗರಸಭೆಗಳು, 1 ಪುರಸಭೆ ಮತ್ತು 111 ಗ್ರಾಮಗಳನ್ನು ವಿಲೀನಗೊಳಿಸುವ ಮೂಲಕ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ರಚಿಸುವ ಬಗ್ಗೆ ಸಾರ್ವಜನಿಕ ಆಕ್ಷೇಪಣೆಗಳನ್ನು /ಸಲಹೆಗಳನ್ನು

ಆಹ್ವಾನಿಸಲಾಗಿತ್ತು ಏತನ್ಮಧ್ಯೆ ದಿನಾಂಕ 23 11 2006 ರಂದು ಬೆಂಗಳೂರು ಮಹಾ ನಗರ ಪಾಲಿಕೆಯ ಅಧಿಕಾರಾವಧಿಯು ಮುಕ್ತಾಯ ಗೊಂಡ ಕಾರಣ ಆಡಳಿತಾಧಿಕಾರಿಗಳನ್ನು ನೇಮಕ ಮಾಡಲಾಗಿತ್ತು ಮುಂದುವರಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಚನೆ ಕುರಿತು ಸ್ವೀಕೃತವಾದ ಆಕ್ಷಪಣೆಗಳನ್ನು/ಸಲಹೆಗಳನ್ನು ಸಮಗ್ರವಾಗಿ ಪರಿಶೀಲಿಸಿ ಅಂತಿಮ ಅಧಿಸೂಚನೆಯನ್ನು ದಿನಾಂಕ'16 1 2007 ರಂದು ಹೊರಡಿಸಲಾಗಿದೆ ಅದಲ್ಲದೆ, ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ ವ್ಯಾಪ್ತಿಯಲ್ಲಿನ ಕ್ಷೇತ್ರಗಳ ಪುನರ್ ವಿಂಗಡನೆ ಪ್ರಕ್ರಿಯೆಯನ್ನು ನಿರ್ವಹಿಸಲು ಮೆ ಎನ್ ಸಾಫ್ಟ್ ಇಂಡಿಯಾ ಪ್ರೈ ಲಿ ಇವರಿಗೆ ದಿ 8 11 2006 ರಂದು ವಹಿಸಲಾಗಿದ್ದು, ಸದರಿ ಪ್ರಕ್ರಿಯೆಯು ಪ್ರಗತಿಯಲ್ಲಿದೆ ಕ್ಷೇತ್ರಗಳ ಪುನರ್ ವಿಂಗಡಣೆ ಕಾರ್ಯ ಮುಗಿದ ನಂತರ ಕಾನೂನುರೀತ್ಯಾ ಮೀಸಲಾತಿ ನಿಗಧಿ ಪಡಿಸಿ ಚುನಾವಣೆ ಜರುಗಿಸುವ ಬಗ್ಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು

ಮೇಲೆ ನಮೂದಿಸಿದ ಪ್ರಕ್ರಿಯೆಗಳು ದಿನಾಂಕ 19 1 2007 ರಂದು ಮುಗಿದಿದ್ದರಿಂದ (ಬನ್ನೂರು ಹೊರತುಪಡಿಸಿ) ಮೇಲ್ಕಂಡ ಅನಿವಾರ್ಯ ಕಾರಣಗಳಿಂದ ಸಕಾಲದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸಲು ಸಾಧ್ಯವಾಗಿರುವುದಿಲ್ಲ

ಇ) ಸರ್ಕಾರವು ದಿ 19 1 2007ರಂದು ಎಲ್ಲಾ ಜಿಲ್ಲಾಧಿಕಾರಿಯವರಿಗೆ ಪತ್ರ ಬರೆದು ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ದಿ 31 1 2007 ರ ಒಳಗೆ ಮೀಸಲಾತಿ ಯನ್ನು ನಿಗಧಿಪಡಿಸಿದ ಅಧಿಸೂಚನೆಯನ್ವಯ ಪ್ರತಿಗಳನ್ನು ಮುದ್ರಾಂ ಆಗಿ ರಾಜ್ಯ ಚುನಾವಣಾ ಆಯೋಗ ಇವರಿಗೆ ತಲುಪಿಸುವಂತೆ ನಿರ್ದೇಶನ ನೀಡಲಾಗಿತ್ತು ಕೆಲ ಜಿಲ್ಲಾಧಿಕಾರಿಗಳು ಮೀಸಲಾತಿ ನಿಗದಿಪಡಿಸುವ ಬಗ್ಗೆ ಸರ್ಕಾರದ ಸ್ಪಷ್ಟೀಕರಣ

ಕೋರಿರುತ್ತಾರೆ ಸ್ಪಷ್ಟೀಕರಣ ನೀಡುವ ಪೂರ್ವದಲ್ಲಿ ಕಾನೂನು ಅಭಿಪ್ರಾಯ ಪಡೆಯುವುದು ಸೂಕ್ತವೆಂದು ಭಾವಿಸಿ ಕಾನೂನು ಇಲಾಖೆಯ ಅಭಿಪ್ರಾಯ ಪಡೆಯುವ ಬಗ್ಗೆ ಕಡತವನ್ನು ಕಾನೂನು ಇಲಾಖೆಗೆ ಕಳುಹಿಸಲಾಗಿದೆ ಕಾನೂನು ಇಲಾಖೆಯ ಅಭಿಪ್ರಾಯ ಬಂದ ತಕ್ಷಣ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಮೀಸಲಾತಿಯನ್ನು ನಿಗಧಿಪಡಿಸಿ ಚುನಾವಣೆ ನಡೆಸುವ ಬಗ್ಗೆ ಆಯುಕ್ತರು, ರಾಜ್ಯ ಚುನಾವಣಾ ಆಯೋಗ ಇವರನ್ನು ಕೋರಲಾಗುವುದು

ಈ) ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 19 10 2006ರ ಆದೇಶದಲ್ಲಿ ಆಯುಕ್ತರು, ರಾಜ್ಯ ಚುನಾವಣಾ ಆಯೋಗ ಇವರು ನಗರ ಸ್ಥಳಿಯ ಸಂಸ್ಥೆಗಳಿಗೆ ಚುನಾಯಿತ ಕೌನ್ಸಿಲ್ ಅವಧಿ ಮುಗಿಯುವುದರೊಳಗಾಗಿ ಚುನಾವಣೆಯನ್ನು ನಡೆಸುವಂತೆ ನಿರ್ದೇಶನ ನೀಡಿದೆ

ಉ) ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ, 7107/06, 7871/06ಗೆ ಸಂಬಂಧಿಸಿದಂತೆ ದಿನಾಂಕ 16 6 2006 ರ ಉಚ್ಚ ನ್ಯಾಯಾಲಯದ ಆದೇಶದಲ್ಲಿ 2001ರ ಜನಗಣತಿಯನ್ವಯ ಆಧಾರದ ಮೇಲೆ ಎಲ್ಲಾ ನಗರ ಸ್ಥಳಿಯ ಸಂಸ್ಥೆಗಳ ವಾರ್ಡುಗಳನ್ನು ಪುನರ್ ವಿಂಗಡಿಸಿ ತದನಂತರ ಮೀಸಲಾತಿಯನ್ನು ನಿಗಧಿಪಡಿಸಲು ನಿರ್ದೇಶನ ನೀಡಿರುವ ಹಿನ್ನಲೆಯಲ್ಲಿ ಸಂಬಂಧಿಸಿದ ಎಲ್ಲಾ ಜಿಲ್ಲಾಧಿಕಾರಿಗಳು ಈಗಾಗಲೇ ವಾರ್ಡುಗಳಿಗೆ ಸಂಬಂಧಪಟ್ಟಂತೆ ಕ್ಷೇತ್ರಗಳಿಗೆ ಮರುವಿಂಗಡಣೆ ಪೂರ್ಣಗೊಳಿಸುತ್ತಾರೆ ಈ ಪ್ರಕ್ರಿಯೆ ಈಗ ತಾನೆ ಮುಗಿಸಿರುವುದರಿಂದ ಮೇಲೆ ನಮೂದಿಸಲಾದ ಎಲ್ಲಾ ನಗರ ಸ್ಥಳೀಯ ಸಂಸ್ಥೇಗಳಿಗೆ ಮೀಸಲಾತಿಯನ್ನು ನಿಗಧಿಪಡಿಸಿ ಚುನಾವಣೆಯನ್ನು ನಡೆಸಲು ಕ್ರಮ ವಹಿಸುವಂತೆ ರಾಜ್ಯ ಚುನಾವಣಾ ಆಯೋಗವನ್ನು ಕೋರಲಾಗುವುದು

ANNEXURE

Sl No	Name of the District	Corporation		City Municipal Council		Town Municipal Council		Town Panchayath	
1	Bangalore	BBMP	23 11 2006			Anekal	14 3 2006		
2	Bangalore Rural			Doddaballapur	11 12 2006	Devanahalli	13 5 2006	Nelamangala	10 1 2007
				Channapatna	4 1 2007	Vijayapura	14 6 2006		
				Ramanagar	4 1 2007	Kanakapura	13 6 2006		
						Magadi	12 12 006		
						Hoskote	2 1 2007		
3	Chitradurga			Chitradurga	1 1 2007	Challakere	3 1 2007	Molakalmur	4 1 2007
						Hiryur	6 1 2007	Holalkere	3 1 2007
								Hosadurga	2 1 2007
4	Davanagere			Davanagere	1 1 2007			Harapanahalli	25/12/2006
				Harihara	2 1 2007			Jagalur	4 1 2007
								Honnali	30 12 2006
								Channagri	2 1 2007

5	Shimoga			Shimoga	14 6 2006	Sagar	28 12 2006	Thirthahalli	26 12 2006
				Bhadravathi	23 12 2006	Shikaripura	25 12 2006	Hosanagar	30 12 2006
								Shiralakoppa	27 12 2006
								Soraba	2 12 2006
								Jogkargal	26 1 2008
6	Kolar			Chakkaballapur	2 1 2007	Bangarpet	2 1 2007	Srinivasapur	3 1 2007
				Chintamani	1 1 2007	Gowribdanur	1 1 2007	Bagepalli	6 1 2007
				Kolar	31 12 2006	Mulabagal	4 1 2007	Gudibande	3 1 2007
				Robertsonpet	28 12 2006	Malur	31 12 2006		
						Siddlaghatta	12 12 2006		
				Tumkur	30 12 2006	Madhugiri	27 12 2006	Pavagada	26 12 2006
						Kunigal	28 12 2006	Turuvekere	26 12 2006
						Tiptur	27 12 2006	Koralagene	27 12 2006
						Sira	28 12 006	Gubbi	28 12 2006
						Chiknayakanhalli	27 12 2006		
8	Mysore	Mysore	21 6 2006			K R Nagar	28 12 2006	Bannur	30 12 2006
						Hunsur	29 12 2006	H D Kote	30 12 2006

						Nanjangud	3 1 2007	T Narasipur	28 12 2006
								Piriyapatna	29 12 2006
								Saragur	18 1 2009
9	Chamarajanagar			Chamarajangar	8 1 2007	Kollegal	2 1 2007	Yaandur	1 2007
						Gundlupet	3 1 2007	Hanur	-
10	Chickmagalur			Chikamagalur	13 6 2006	Kadur	3 1 2007	Tarikare	14 6 2006
						Birur	1 1 2007	Mudigere	1 2007
								N R Pura	2 1 2007
								Koppa	2 1 2007
								Sringeri	2 1 2007
11	Dakshin Kannada	MagaloreCC	16 6 2007			Moodabidro	1 1 2007	Bantwal	30 12 2006
						Putur	2 1 2007	Ullal	8 1 2007
								Sullya	3 1 2007
								Belthangadi	2 ,1 2007
								Mulki	15 1 2008
12	Udupi			Udupi	8 1 2007	Kundapur	28 12 2006	Saligrama	27 8 2007
				Hassan	10 6 2006	Arasikere	12 6 2006	Belur	1 6 2006

						C R Patna	13 6 2006	Alur	12 12 2006
						Hoeenarsipur	14 6 2006	Arakalgud	28 12 006
						Sakaleshpur	28 12 2006		
14	Mandya			Mandya	3 1 2007	Malayalli	30 12 2006	Pandauapur	1 2007
						Maddur	3 1 2007	K R Pet	2 1 2007
						Sirangapatna	1 1 2007	Nagamangal	2 1 2007
15	Kodagu			Madikeri	1 1 2007			Kushalnagara	
								Virajpet	30 12 2006
								Somuarpet	2 1 2007
16	Belgaum	Belgaum	15 6 2006	Nippan	14 6 2006	Ramadurga	14 6 2006	Khanapur	14 6 2006
				Gokak	28 12 2006	Chikkodi	28 12 2006	Sadalaga	14 6 2006
						Sauadatti	28 12 2006	Hukkeri	2 1 2007
						Bailahongala	1 1 2007	Raibagh	2 1 2007
						Atnani	18 1 2007	Kudachi	1 2007
						Mudalagi	3 1 2007	Konnur	29 1 2007
						Sankeshvar	1 1 2007		
17	Bijapur			Bijapur	4 1 2007	Indi	28 12 2006	B Bagewadi	3 1 2007

						Sindhagi	31 12 2006		
						Muddlebihal	6 1 2007		
						Talikote	7 1 2007		
18	Dharwad	Hubli - Dharwad	18 6 2006			Annigeri	1 1 2007	Navalgund	30 12 2006
								Kalaghatagi	30 12 2006
								Kundgol	4 1 2007
								Alnavar	1 2007
19	Gadag			Gadag Betgeri	12 6 2006	Naragund	28 12 2006	Mulgund	30 12 2006
						Gajendragad	28 12 2006	Mundaragi	30 12 2006
						Lakshmeshwar	27 3 2007	Ron	30 12 2006
								Shirahatti	29 12 2006
								Naregal	28 12 2006
20	Haveri			Ranibennur	3 1 2007	Byadagi	2 1 2007	Shiggon	2 1 2007
				Haveri	4 1 2007	Hanagal	3 1 2007	Bankapur	1 2007
						Savanur	4 1 2007	Hirekeur	1 2007
21	Uttara Kannada			Karwar	7 1 2007	Kumta	6 1 2007	Honhvar	8 1 2007

				Dandel	7 1 2007	Bhatkal	9 1 2007	Anokla	7 1 2007
				Sirsi	8 1 2007			Haliyal	6 1 2007
								Siddapur	9 1 2007
								Yallapur	10 1 2007
								Mundagod	8 1 2007
22	Bellary	Bellary	Ready	Hospet	4 1 2007	Kampli	14 3 2006	Sirguppa	12 6 2006
								Tekkalkote	14 6 2006
								Kamalapur	30 12 2006
								Kottur	1 2007
								H Hadagali	4 1 2007
								Sandur	3 1 2007
								Kudligi	8 1 2007
23	Bidar			Bidar	10 1 2007	Basavakalyan	1 1 2007	Aurad	1 2007
						Humnabad	16 1 2007		
						Chitaguppa	2 1 2007		
						Bhalki	2 4 2007		
24	Gulbarga	Gulbarga	21 6 2006	Shahabad	8 1 2007	Aland	3 1 2007	Gurumitkal	4 1 2007

						Chittapur	2 1 2007	Afzalpur	7 1 2007
						Sedum	4 1 2007	Chhincholi	8 1 2007
						Shahapur	8 1 2007	Jewargi	1 2007
						Shorapur	7 1 2007		
						Yadgir	6 1 2007		
						Wadi	6 4 2008		
25	Raichur			Raichur	3 1 2007	Sindanur	14 6 2006	Lingasugur	9 1 2007
						Manvi	14 6 2006	Mudagal	8 1 2007
								Devadurga	2 1 2007
26	Koppa			Ganagavathi	10 6 2006			Kustagi	3 1 2007
				Koppal	12 6 2006			Yalburga	2 1 2007
				Bagalkote	13 6 2006	Jamakandi	13 6 2006	Hungund	14 6 2006
				R Banahatti	14 6 2006	Mudhol	13 6 2006	Badami	14 6 2006
						Mahalingpur	14 6 2006	Kerur	14 6 2006
						Ilkal	14 6 2006	Terdal	28 12 2006
						Guledagudda	13 6 2006	Bilagi	27 12 2006